ವಿಶಾಖ ಎನ್.

# ತಾರಾ ಸಂಭಾವನೆಯ ಬಿಸಿ ಚರ್ಚೆ



ಸ್ಟಾರ್ ನಟರನ್ನು ನಂಬಿ ಹಣ ಹೂಡಿ, ಲಾಭ ಬಂದೇ ಬರುತ್ತದೆ ಎಂದು ಭರವಸೆ ಇಟ್ಟುಕೊಳ್ಳುವ ಜಮಾನ ಇದಲ್ಲ ಎಂದು ಇತ್ತೀಚೆಗೆ ನಿರ್ದೇಶಕ ಹಾಗೂ ನಿರ್ಮಾಪಕ ಕರಣ್ ಜೋಹರ್ ಹೇಳಿದರು.

ಹಿಂದಿ ಸಿನಿಮಾರಂಗದಲ್ಲಿ ಹತ್ತು ತಾರೆಗಳು ಇವೆ ಎಂದು ಇಟ್ಟುಕೊಳ್ಳೋಣ. ಅವರೆಲ್ಲ ಸೂರ್ಯ, ಚಂದ್ರರನ್ನು ಕೇಳುತ್ತಾರೆ. ನಲವತ್ತು ಕೋಟಿ ರೂಪಾಯಿಯಲ್ಲಿ ಸಿನಿಮಾ ಮಾಡೋಣ ಎಂದುಕೊಂಡರೆ, ಅಷ್ಟೇ ಮೊತ್ತದ ಸಂಭಾವನೆ ಕೇಳುತ್ತಾರೆ. ಹಿಂದಿನ ಎರಡು ಸಿನಿಮಾಗಳ ಗಳಿಕೆ ಎಷ್ಟು ಎಂದು ಕೇಳಿದರೆ, ಅವರಲ್ಲಿ ಸ್ಪಷ್ಟ ಉತ್ತರ ಇರುವುದಿಲ್ಲ ಎಂದು ಕರಣ್ ಅವರು ಸಂದರ್ಶನವೊಂದರಲ್ಲಿ ನಿರ್ಭಿಡೆಯಿಂದ ತಮ್ಮ ಅನುಭವ ಹಂಚಿಕೊಂಡಿದ್ದರು. ಇದಕ್ಕೆ ಸೈಫ್ ಅಲಿ ಖಾನ್ ಉತ್ತರರೂಪದಲ್ಲಿ ಪ್ರತಿಕ್ರಿಯಿಸಿದ್ದಾರೆ.

ನಟರು ಬಾಯಿಗೆ ಬಂದಷ್ಟು ಹಣ ಕೇಳಿದರೆ ಸುಖಾಸುಮ್ಮನೆ ನಿರ್ಮಾಪಕರು ಕೊಡುವುದಿಲ್ಲ ಎನ್ನುವುದು ಅವರ ಸ್ಪಷ್ಟನೆ.

ಮಾರುಕಟ್ಟೆ ಆಯಾ ಕಾಲಘಟ್ಟದಲ್ಲಿ ಹೇಗೆ ಇದೆ, ತಮ್ಮ ಅಭಿನಯಕ್ಕೆ ಎಷ್ಟು ಹಣ ಮರಳಿ ಬರಬಹುದು, ಅದರಿಂದ ಇಡೀ ಸಿನಿಮಾ ಗಳಿಕೆ ಅಂದಾಜು ಎಷ್ಟು ಇರುತ್ತದೆ ಎಂಬುದು ನಟ–ನಟಿಯರಿಗೆ ಗೊತ್ತಿರುತ್ತದೆ. ಅದಕ್ಕೆ ತಕ್ಕಹಾಗೆ ಸಂಭಾವನೆ ಗೊತ್ತುಪಡಿಸಿಕೊಳ್ಳುವುದು ಸಹಜ. ಕೊಡುವವರು ಇರುವಾಗ ತೆಗೆದುಕೊಳ್ಳುವವರು ಕೂಡ ಇರುತ್ತಾರೆ ಎನ್ನುವುದು ತತ್ತ್ವ. ಅದಕ್ಕೆ ತಾವೇ ಉದಾಹರಣೆ ಎಂದು ಸೈಫ್ ಅಲಿ ಖಾನ್ ಹೇಳಿದ್ದಾರೆ.

ಖುದ್ದು ಸಿನಿಮಾ ನಿರ್ಮಾಣದಲ್ಲೂ ತೊಡಗಿಕೊಂಡಿರುವ ಸೈಫ್, ನಿರ್ದೇಶಕ ಕರಣ್ ತಮ್ಮಂತಹ ನಟರ ಸಂಭಾವನೆಗೆ ಕತ್ತರಿ ಹಾಕುವ ಯೋಚನೆ ಮಾಡುತ್ತಿರಬಹುದು ಎಂದು ತಮಾಷೆಯ ಧಾಟಿಯಲ್ಲಿ ಕೂಡ ಹೇಳಿದ್ದೇ ಅಲ್ಲದೆ, ಕರಣ್ ಅವರಿಗೆ ಉದ್ಯಮದ ಆಳ ಅಗಲ ಗೊತ್ತಿಲ್ಲದೆ ಏನೂ ಇಲ್ಲ ಎಂದೂ ಮಾತು ಸೇರಿಸಿದ್ದಾರೆ. ಕರಣ್ ಜೋಹರ್ ವ್ಯವಹಾರ ಚತುರ ಎಂದೂ ಎನಿಸಿಕೊಂಡವರು. ‘ಬಾಹುಬಲಿ’ ತೆಲುಗು ಚಿತ್ರದ ಹಿಂದಿ ಭಾಷೆಗೆ ಡಬ್ ಆದ ಅವತರಣಿಕೆಯ ವಿತರಣೆ ಹಕ್ಕನ್ನು ಅವರು ಪಡೆದುಕೊಂಡಿದ್ದರು. ಅದರಿಂದ ಒಳ್ಳೆಯ ಲಾಭವೂ ಅವರಿಗೆ ಸಂದಿತ್ತು. ■

# ದೀಪಿಕಾ ಹೇಳಿದ ಅವ್ವನ ಅನುಭವ



ದೀಪಿಕಾ ಪಡುಕೋಣೆ ಈಗ ತಾಯಿ. ಅವರು ಹೇಳಿಕೊಳ್ಳುವ ಅನುಭವ ಕೂಡ ಮಾತೃಹೃದಯದವೇ ಆಗಿರುವುದೀಗ ಸಹಜ. ಅವರು ಮೊನ್ನೆ ಮೊನ್ನೆ ಇನ್‌ಸ್ಟಾಗ್ರಾಮ್‌ನಲ್ಲಿ ಒಂದು ಪೋಸ್ಟ್ ಹಾಕಿದರು. ಮಗುವಿಗೆ ಹಾಲೂಡಿಸುವ ಸೂಕ್ಷ್ಮ ಹಾಗೂ ಮಗು ತನ್ನ ಆಹಾರ ಪಡೆದುಕೊಳ್ಳುವಾಗ ಕಾಡಿಸುವ ಪರಿಯನ್ನು ಅದು ಒಳಗೊಂಡಿತ್ತು. ಹಸಿವಾದಾಗ ಮಗು ಸಾಮಾನ್ಯವಾಗಿ ತನಗೆ ಅಗತ್ಯ ಇರುವಷ್ಟು ಹಾಲನ್ನು ಕುಡಿಯುತ್ತದೆ. ಇಂತಹ ವಿಷಯಗಳ ಕುರಿತು ಮೊದಲೇ ವೈದ್ಯರಿಂದ ಕೇಳಿ ತಿಳಿದುಕೊಂಡಿದ್ದ ದೀಪಿಕಾ ಅವರಿಗೆ, ಖುದ್ದು ತಾಯಿ ಆದಮೇಲೆ ಬೇರೆ ರೀತಿಯ ಅನುಭವ ಆಗುತ್ತಿದೆ. ತಮ್ಮ ಮಗು ಹಾಲು ಕುಡಿಯಲು ಸಿದ್ಧ ಆದಂತೆ ಮಾಡಿ, ಆಮೇಲೆ ತುಸುವಷ್ಟೇ ಕುಡಿದು ತಲೆಯನ್ನು ಪಕ್ಕಕ್ಕೆ ಹಾಕಿ ಮಲಗಿ ಕಾಡಿಸುವ ಅನುಭವ ಅದು. ಈ ಸಂಗತಿಯನ್ನು ದೀಪಿಕಾ ಅಡುಗೆ ಮಾಡುವ ಮಗುವಿನ ತಾಯಿಯೊಬ್ಬಳ ಕಥನವೊಂದಕ್ಕೆ ಸಮೀಕರಿಸಿ ಬಣ್ಣಿಸಿದ್ದಾರೆ.

ತಾಯಿಯು ಅಡುಗೆಮನೆಗೆ ಹೋಗಿ ಖಾದ್ಯ ತಯಾರಿಸುತ್ತಾಳೆ. ಆಮೇಲೆ ತಟ್ಟೆಗೆ ಹಾಕಿಕೊಂಡು, ಒಂದು ತುತ್ತು ತಿನ್ನುತ್ತಲೇ ನಿದ್ರಾದೇವಿ ಆವರಿಸಿಕೊಳ್ಳುತ್ತಾಳೆ. ತಟ್ಟೆಯನ್ನು ಹಾಗೆಯೇ ಪಕ್ಕಕ್ಕೆ ಇಟ್ಟು, ಮಲಗಿಬಿಡುತ್ತಾಳೆ. ಈ ಘಟನೆಯನ್ನು ನವಜಾತ ಶಿಶು ಹಾಲು ಕುಡಿಯುವ ರೀತಿಗೆ ದೀಪಿಕಾ ಸಮೀಕರಿಸಿ ಬಣ್ಣಿಸಿದ್ದಾರೆ. ತಮ್ಮ ಮಗು ಹೀಗೆಯೇ ಮಾಡುವುದು ಎನ್ನುವುದನ್ನು ಅವರು ಹೀಗೆ ವಯಾ ಮೀಡಿಯಾ ಹೇಳಿದ್ದಾರೆ. ಅವರ ಈ ಪೋಸ್ಟ್‌ಗೆ ಅನೇಕರು ಪ್ರತಿಕ್ರಿಯೆ ನೀಡಿದ್ದಾರೆ.

ಡಿಜಿಟಲ್ ವೇದಿಕೆ ಈಗ ನಟ–ನಟಿಯರಿಗೆ ತಮ್ಮ ಬದುಕಿನ ಸಣ್ಣಪುಟ್ಟ ಖುಷಿಗಳನ್ನು ಹಂಚಿಕೊಳ್ಳುವ ಸಶಕ್ತ ಮಾರ್ಗವಾಗಿದೆ. ದೀಪಿಕಾ ತಮ್ಮ ತಾಯ್ತನದ ಇನ್ನಷ್ಟು ಅನುಭವಗಳನ್ನು ಇಲ್ಲಿ ಹಂಚಿಕೊಳ್ಳುವುದರಲ್ಲಿ ಅನುಮಾನವೇ ಇಲ್ಲ.

ತೆಲುಗಿನ ‘... ಕಲ್ಕಿ’ ಸಿನಿಮಾದ ಯಶಸ್ಸು ಅವರ ಮಾರುಕಟ್ಟೆಯನ್ನು ಮತ್ತೆ ಖಾತರಿಪಡಿಸಿತು. ಮುಂದಿನ ಅವರ ಅಭಿನಯದ ಇನಿಂಗ್ಸ್ ಹೇಗೆ ಇದ್ದೀತು ಎಂಬ ಪ್ರಶ್ನೆಯೂ ಅಭಿಮಾನಿಗಳಿಗೆ ಇದೆ. ■